ಅದೊಂದು ಆಕಸ್ಮಿಕವಾಗಿ ಸಿಕ್ಕಿದಂತಹ ವಿನೂತನ ಅವಕಾಶವಾಗಿತ್ತು. ಆದರೆ ಡೊನಾಲ್ಡ್ ಒಳ್ಳೆಯ ಮನೋಲಹರಿಯಲ್ಲಿದ್ದ. ದೃಢಕಾಯನಾಗಿ ಆರೋಗ್ಯಪೂರ್ಣನಾಗಿದ್ದ ಅವನು ಪ್ರಯಾಸಕರವಾದ ಕೆಲಸವನ್ನು ಪೂರ್ಣಗೊಳಿಸಿದ ಭಾವದಲ್ಲಿ ಉದಾಸೀನನಾಗಿದ್ದ. ಈಗ ಅವನು ಬಹುಶಃ ತನಗೆ ತಾನೇ ಬಹುಮಾನಕೊಟ್ಟುಕೊಳ್ಳುವ ಲಹರಿಯಲ್ಲಿದ್ದ.

ವಿಮಾನ ಮಧ್ಯಪಶ್ಚಿಮ ಪ್ರದೇಶದ ಆ ಬಿರುಬೇಸಿಗೆಯಲ್ಲಿ ಭೂಮಿಯ ಮೇಲೆ ಬಂದಿಳಿದು, ಅವನು ಹೊರಗೆ ಹೆಜ್ಜೆ ಇಟ್ಟಾಗ ರಾತ್ರಿಯಾಗಿತ್ತು. ಅವನು ಊರಿನಿಂದ ದೂರದಲ್ಲಿರುವ ನಿರ್ಜನವಾದ ವಿಮಾನನಿಲ್ದಾಣದ ಕಡೆಗೆ ಹೊರಟ. ಅದನ್ನು ಹಳೆಯ ಕೆಂಪು 'ರೈಲ್ವೆಡಿಪೋ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅವಳು ಬದುಕಿದ್ದಾಳೆಯೇ ಅಥವಾ ಈ ಊರಿನಲ್ಲಿಯೇ ವಾಸವಾದ್ದಾಳೆಯೇ ಅಥವಾ ಅವಳ ಈಗಿನ ಹೆಸರು ಏನು ಎಂಬುದೂ ಅವನಿಗೆ ಗೊತ್ತಿರಲಿಲ್ಲ. ಉತ್ಸಾಹದ ಭರದಲ್ಲಿ ಅವಳ ತಂದೆಯ ಹೆಸರಿಗಾಗಿ ಫೋನ್ ಪುಸ್ತಕದಲ್ಲಿ ಹುಡುಕಾಡಿದ. ಈ ಇಪ್ಪತ್ತು ವರ್ಷಗಳಲ್ಲಿ ಅವಳ ತಂದೆ ಯಾವಾಗಲೋ ಸತ್ತು ಹೋಗಿರಬಹುದು.

ಇಲ್ಲ. ಇದ್ದಾನೆ. ಫೋನ್ ಪುಸ್ತಕದಲ್ಲಿ ಹೆಸರಿದೆ. ನ್ಯಾಯಾಧೀಶ ಹರ್ಮನ್ ಹೋಮ್ಸ್ ಬೆಟ್ಟದ ಬದಿ 3194.

ಮಿಸೆಸ್ ನ್ಯಾನ್ಸಿ ಹೋಮ್ಸ್‌ಳಿಗಾಗಿ ಫೋನ್‌ನಲ್ಲಿ ವಿಚಾರಿಸಿದಾಗ ಹೆಂಗಸೊಬ್ಬಳ ಅಚ್ಚರಿಗೊಂಡ ಉಲ್ಲಸಿತ ಧ್ವನಿ ಉತ್ತರ ನೀಡಿತು.

'ನ್ಯಾನ್ಸಿ, ಈಗ ಮಿಸೆಸ್ ವಾಲ್ಟರ್ ಗಿಫರ್ಡ್, ಯಾರು ನೀವು?'

ಆದರೆ ಡೊನಾಲ್ಡ್ ಏನೂ ಉತ್ತರ ನೀಡದೇ ಸುಮ್ಮನಿದ್ದ. ತನಗೆ ಏನು ತಿಳಿದುಕೊಳ್ಳಬೇಕಾಗಿತ್ತು ಎಂಬುದನ್ನು ಅವನು ನಿಶ್ಚಯಿಸಿಕೊಂಡ ಮತ್ತು ಅವನಿಗೆ ಕೇವಲ ಮೂರು ಗಂಟೆಗಳ ಸಮಯ ಮಾತ್ರ ಉಳಿದಿತ್ತು. ವಾಲ್ಟರ್ ಗಿಫರ್ಡ್ ಎಂಬುವವರು ಯಾರೂ ಅವನಿಗೆ ನೆನಪಿಗೆ ಬರಲಿಲ್ಲ. ಅವನು ಪುನಃ ಫೋನ್ ಪುಸ್ತಕದಲ್ಲಿ ಕಣ್ಣೋಡಿಸುತ್ತಿದ್ದಾಗ ಸ್ವಲ್ಪ ಹೊತ್ತು ಸುಮ್ಮನಿದ್ದು ಯೋಚಿಸಿದ, ಅವಳು ಮದುವೆಯಾಗಿ ಆ ಊರಿನಿಂದ ಬೇರೆ ಕಡೆ ಹೋಗಿರಲೂಬಹುದು.

ಇಲ್ಲ. ಇಲ್ಲೇ ಇದ್ದಾಳೆ. ವಾಲ್ಟರ್ ಗಿಫರ್ಡ್ ಬೆಟ್ಟದ ಬದಿ 1191. ಅವನ ಬೆರಳತುದಿಗಳಿಗೆ ರಕ್ತ ಹರಿದುಬಂದು ಕೆಂಪುಕೆಂಪಾಯಿತು.

'ಹಲೋ?'

'ಹಲೋ. ಅಲ್ಲಿ ಮಿಸೆಸ್ ಗಿಫರ್ಡ್ ಇದ್ದಾರಾ? ಅವರ ಹಳೆಯ ಫ್ರೆಂಡ್ ಮಾತಾಡ್ತಿರೋದು.'

'ಮಿಸೆಸ್ ಗಿಫರ್ಡೇ ಮಾತಾಡ್ತಿರೋದು.'

ಅವನಿಗೆ ನೆನಪಾಯಿತು, ಅಥವಾ ನೆನಪಾಯಿತೆಂದು ಅಂದುಕೊಂಡ. ಧ್ವನಿಯಲ್ಲಿ ಒಂದು ವಿನೋದದ ಜಾದೂ ಇತ್ತು.

'ಈಗ ಮಾತಾಡ್ತಿರೋದು ಡೊನಾಲ್ಡ್ ಪ್ಲಾಂಟ್, ನಾನು ಹನ್ನೆರಡು ವರ್ಷದವನಿದ್ದಾಗ ನಿನ್ನನ್ನು ನೋಡಿದ್ದು,ಆಮೇಲೆ ನೋಡಿಲ್ಲ.'

'ಓಹ್‌ಹ್‌ಹ್!' ಈ ಸ್ವರ ಮಾತ್ರ ಪೂರ್ಣ ಆಶ್ಚರ್ಯಗೊಂಡಿತ್ತು, ಬಹಳ ಸೌಜನ್ಯಯುತವಾಗಿತ್ತು. ಆದರೆ ಅದರಲ್ಲಿ ಸಂತೋಷವಾಗಲೀ ಗುರುತು ಸಿಕ್ಕಿದ ಭಾವವಾಗಲೀ ಇರಲಿಲ್ಲ ಎಂಬುದನ್ನು ಅವನು ಗ್ರಹಿಸಬಲ್ಲವನಾಗಿದ್ದ.